PARISARA SANMRAKSHANA KENDRA
Basavaraj Nilaya
Chowkimath
**SIRSI** (Dist. Uttara Kannada)
Karnataka - 581401 India

: (08384) 225139
E-mail:*appiko@sancharnet.in*

ದಿನಾಂಕ: 26/8/2010

**ವಿಷಯ: ಗುಡವಿ ಪಕ್ಷಿಧಾಮದಲ್ಲಿ ಪಕ್ಷಿ ಹಾಗೂ ವನ್ಯ ಜೀವಿಗಳ ಕುರಿತು ತರಬೇತಿ ಶಿಬಿರ**

ಮಾನ್ಯರೇ,

ಕರ್ನಾಟಕದ ಹೆಸರಾಂತ ಪಕ್ಷಿಧಾಮಗಳಲ್ಲಿ ಒಂದಾಗಿರುವ ಗುಡವಿಯಲ್ಲಿ ಪಕ್ಷಿ ಹಾಗೂ ವನ್ಯಜೀವಿಗಳ ಕುರಿತು ಎರಡು ದಿನದ ಶಿಬಿರವನ್ನು ಏರ್ಪಡಿಸಲಾಗಿದೆ.

ವಿವರ ಈ ಕೆಳಗಿನಂತಿದೆ:

**ಸ್ಥಳ: ಗುಡವಿ ಪಕ್ಷಿಧಾಮ(ಸೊರಬ, ಶಿವಮೊಗ್ಗ)**
**ದಿನಾಂಕ: ಸಪ್ಟೆಂಬರ್ 2 ಹಾಗೂ 3, 2010**

ಈ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಬಂಡೀಪುರ ಹಾಗೂ ನಾಗರಹೊಳೆ ಅರಣ್ಯದಲ್ಲಿ ಕೆಲಸ ಮಾಡುತ್ತಿರುವ ಶ್ರೀ. ರಾಜಕುಮಾರ ಹಾಗೂ ಡ್ಯಾನಿಯಲ್ ಅವರು ಬರಲು ಒಪ್ಪಿಕೊಂಡಿರುತ್ತಾರೆ. ಇದಲ್ಲದೆ ವನ್ಯ ಜೀವಿ ರಕ್ಷಣೆಯಲ್ಲಿ ಕೆಲಸ ಮಾಡಿರುವ ತಜ್ಞರು ಭಾಗವಹಿಸುತ್ತಾರೆ.

ಈ ಶಿಬಿರದಲ್ಲಿ ಭಾಗವಹಿಸಲು ಪಕ್ಷಿಧಾಮದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗ, ಹಾಗೂ ವನ್ಯಜೀವಿ ಸಂರಕ್ಷಣೆಯಲ್ಲಿ ಆಸಕ್ತರಿರುವ ಜನಸಾಮಾನ್ಯರಿಗೆ ಅವಕಾಶವನ್ನು ಕಲ್ಪಿಸಲಾಗಿದೆ.

ಈ ಶಿಬಿರವನ್ನು ಕರ್ನಾಟಕ ಅರಣ್ಯ ಇಲಾಖೆ (ವನ್ಯ ಜೀವಿ ವಿಭಾಗ) ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ.

ಈ ಶಿಬಿರದಲ್ಲಿ ಭಾಗವಹಿಸಲು ನೀವು ಆಸಕ್ತರ ಹೆಸರನ್ನು, ಹಾಗೂ ಅವರ ಮೊಬೈಲ್ ದೂರವಾಣಿ ನಂಬರನ್ನು ತಿಳಿಸಬೇಕಾಗಿ ವಿನಂತಿ. (ಸಂಪರ್ಕ: ಸುಬ್ಬಣ್ಣ: 08384–225139, 9480072185)

ಪಾಂಡುರಂಗ ಹೆಗಡೆ
ಪರಿಸರ ಸಂರಕ್ಷಣಾ ಕೇಂದ್ರ

# ವನ್ಯ ಜೀವಿ ಶಿಬಿರ, ಗುಡವಿ

ದಿನಾಂಕ 2 ಮತ್ತು 3, 2010

ಶಿಬಿರಾರ್ಥಿಗಳಿಗೆ ಮಾಹಿತಿ:

- ಈ ಶಿಬಿರದಲ್ಲಿ ಭಾಗವಹಿಸಲು ಬರುವವರು ವನ್ಯ ಜೀವಿ ಸಂರಕ್ಷಣೆ, ಪಕ್ಷಿ ವೀಕ್ಷಣೆಯಲ್ಲಿ ಆಸಕ್ತಿ ಹೊಂದಿರಬೇಕು.
- ಶಿಬಿರದಲ್ಲಿ ಭಾಗವಹಿಸುವವರಿಗೆ ವಸತಿ, ಊಟ/ತಿಂಡಿಯ ವ್ಯವಸ್ಥೆಯನ್ನು ಮಾಡಲಾಗಿದೆ.
- ನೀವು ಬರುವಾಗ ಈ ಕೆಳಗಿನ ವಸ್ತುಗಳನ್ನು ಮರೆಯದೆ ನಿಮ್ಮ ಜೊತೆ ತೆಗೆದುಕೊಂಡು ಬನ್ನಿ.

  1. ಮಲಗಲು ಹೊದಿಕೆ
  2. ಬಟ್ಟೆ/ಟಾವೆಲು/ ಹಲ್ಲುಜ್ಜುವ ಬ್ರಷ್, ಸಾಬೂನು
  3. ಬ್ಯಾಟರಿ/ ಸೊಳ್ಳೆ ನಿಯಂತ್ರಿಸಲು (Odomos)
  4. ಕೊಡೆ/ರೈನ ಕೋಟ
  5. ದುರ್ಬಿನು, (Binacular)
  6. ಬರೆಯಲು ಪಟ್ಟಿ/ಪೆನ್ನು

- ಶಿಬಿರದಲ್ಲಿ ಎರಡೂ ದಿನ ಭಾಗವಹಿಸುವದು ಅನಿವಾರ್ಯ
- ಶಿಬಿರವು ದಿನಾಂಕ: 2/9/2010 ರಂದು ಮುಂಜಾನೆ ಹತ್ತು ಗಂಟೆಗೆ ಆರಂಭವಾಗಿ ದಿ: 3/9/2010 ರಂದು ನಾಲ್ಕು ಗಂಟೆಗೆ ಮುಕ್ತಾಯವಾಗುವುದು.
- ಗುಡವಿ ತಲುಪಲು ತಾವು ಸೂರಬದಿಂದ ಗುಡವಿ ಕ್ರಾಸ್‌ಗೆ ಬಂದು ಅಲ್ಲಿಂದ ಗುಡವಿ ಪಕ್ಷಿಧಾಮ ತಲುಪಬಹುದು.

ಪರಿಸರ ಸಂರಕ್ಷಣಾ ಕೇಂದ್ರ